SN – 667

**III Semester B.Com. Examination, Nov./Dec. 2013**
**(New Syllabus) (2013-14 & Onwards)**
**COMMERCE**
**3.3 : Corporate Accounting**

Time : 3 Hours                                                      Max. Marks : 100

***Instruction*** : *Answers should be written* ***completely*** *either in* ***English*** *or in* ***Kannada****.*

SECTION – A

Answer **any ten** sub-questions. **Each** sub-question carries **two** marks. **(2×10=20)**

1. a) Give the meaning of Purchase Consideration.

   b) How is purchase consideration determined under net assets method ?

   c) How is excess of net assets over purchase consideration treated in the books of account of a company ?

   d) Give the meaning of profit prior to incorporation.

   e) How is pre-incorporation loss treated in the books of account ?

   f) State any four circumstances that necessitate the valuation of Goodwill in case of Joint Stock Companies.

   g) How is Goodwill calculated under Weighted average method ?

   h) How is value of shares determined under Yield value method ?

   i) Profit available to equity shareholders Rs. 4,50,000; normal rate of return 15% and number of equity shares 25,000. Find out value of Equity Shares.

   j) Distinguish between Interim Dividend and Final Dividend.

   k) What is the maximum rate of managerial remuneration payable as per Companies Act, 1956 ?

   l) State any four non-current assets.

**P.T.O.**

## SECTION – B

Answer **any four** of the following. **Each** question carries **eight** marks. **(8×4=32)**

2. Mr. A and Mr. B are equal partners in M/s AB and Company. They agree to sell their business to AB Ltd., which agrees to take over all the assets and liabilities of the firm at the values agreed as under :

   Goodwill Rs. 75,000; Buildings Rs. 1,25,000; Machinery Rs. 1,90,000; Stock Rs. 85,000; Debtors Rs. 45,000; Bills receivable Rs. 40,000; Creditors Rs. 60,000 and Bills payable Rs. 30,000.

   AB Ltd., discharges the purchase consideration as under: Issue of 30,000 equity shares of Rs. 10 each at a premium of 10%; 1,200 12% Debentures of Rs. 100 each and the balance in cash.

   Calculate purchase consideration and show the journal entry for discharge of purchase consideration in the books of AB Ltd.

3. SS Ltd., was incorporated on 1-7-2012 to take over the running business of M/s SK & Co., with effect from 1-4-2012. The company closes its books of account on 31-3-2013.

   There were 50 employees during the pre-incorporation period and it was increased to 70 employees during the post incorporation period.

   Average monthly sales during the pre-incorporation period was Rs. 1,00,000 and the average monthly sales of post-incorporation period was Rs. 2,50,000.

   Prepare a statement showing how the following expenses are allocated between pre and post incorporation periods:

   Rent Rs. 96,000; Salary Rs. 3,12,000; Salesman commission Rs. 1,02,000 and Directors fees Rs. 25,000.

4. Nischal Ltd., proposed to purchase the business of Nishanth Ltd., For this purpose, Goodwill is agreed to be valued at 2 years purchase of the weighted average profits of the past 3 years.

   The weights to be used are: 2010 – 1; 2011 – 2 and 2012 – 3.

   The profits were: 2010 – Rs. 46,000; 2011 – Rs. 56,000 and 2012 – Rs. 45,000.

   It is ascertained that the closing stock of 2011 was overvalued by Rs. 7,000.

   You are required to calculate the value of Goodwill assuming that Rs. 10,000 should be provided to cover management expenses.

5. From the following information calculate the value of Equity Shares under Yield Method.

   a) The paid up share capital of X Ltd., consists of 10,000 15% Preference Shares of Rs. 100 each fully paid and 2,00,000 Equity Shares of Rs. 10 each Rs. 6 paid up.

   b) The average profits of the last 3 years before tax was Rs. 8,50,000. Provision for taxation is made at 30% and 20% of the profit after tax is transferred to reserves every year. Normal rate of return is 8%.

6. Under what heading the following items (given in trial balance) are shown in the final accounts of the Joint Stock Company.

   a) Discount on issue of shares

   b) Livestock

   c) Discount earned

   d) Accrued interest on investments

   e) Goodwill written-off

   f) Patents and Trademarks

   g) Work-in-progress

   h) Goodwill.

## SECTION – C

Answer **any three** of the following. **Each** question carries **sixteen** marks. **(16×3=48)**

7. RKS Ltd., was incorporated on 1-9-2012 to take over the running business of M/s SK & Co., with effect from 1-4-2012. The company closed its books of account on 31-3-2013. Following are the incomes and expenses of RKS Ltd., for the year ending 31-03-2013.

| **Particulars** | **Rs.** | **Particulars** | **Rs.** |
|---|---|---|---|
| Gross profit | 24,00,000 | Interest to vendors | |
| Discount earned | 1,14,000 | (up to 31-1-2013) | 60,000 |
| Interest on investments | 1,20,000 | Rent paid | 96,000 |
| Salary & wages | 3,60,000 | Selling expenses | 54,000 |
| Discount Allowed | 2,16,000 | Directors fees | 30,000 |
| Preliminary expenses | | Auditors fees | 24,000 |
| written off | 10,000 | Depreciation | 1,44,000 |
| General expenses | 24,000 | Insurance | 12,000 |
| Carriage outward | 5,400 | Carriage inward | 2,280 |
| Bad debts | 3,600 | Interest on debentures | 24,000 |

**Additional information :**

1) Average monthly purchases during the pre-incorporation period was Rs. 1,50,000 and the average monthly purchases of post-incorporation period was Rs. 3,00,000.
2) Average monthly sales during the pre-incorporation period was Rs. 2,00,000 and the average monthly sales of post-incorporation period was Rs. 5,00,000.

Prepare a statement showing the allocation of above items between pre and post-incorporation periods and state how the pre and post incorporation profits are dealt within the books of accounts.

8. The net profits of SN Ltd., before providing for taxation at 30% are as follows :

| Financial Year | Profits (Rs.) | Weights |
|---|---|---|
| 2008-09 | 1,60,000 | 1 |
| 2009-10 | 1,68,000 | 2 |
| 2010-11 | 1,80,000 | 3 |
| 2011-12 | 1,84,000 | 4 |
| 2012-13 | 1,88,000 | 5 |

The present value of assets and liabilities of the company are as under: Buildings Rs. 12,00,000; Machinery Rs. 6,00,000; Furniture Rs. 2,00,000; Stock Rs. 3,00,000; Debtors Rs. 1,00,000; Cash & Bank Rs. 50,000; Debentures Rs. 5,00,000; Creditors Rs. 3,00,000; Bills Payable Rs. 80,000 and Bank Loan Rs. 7,70,000.

Normal rate of return on net capital employed is 10%.

You are required to find out the value of goodwill under the following methods:

a) 2 years purchase of the Simple Average Profits

b) 2 years purchase of the Weighted Average Profits

c) 5 years purchase of Super Profits of the past 5 years.

9. The Balance Sheet of NV Ltd., as on 31-03-12 is as under :

| **Liabilities** | **Rs.** | **Assets** | **Rs.** |
|---|---|---|---|
| Equity Shares of Rs. 100 each | 10,00,000 | Fixed Assets | 11,00,000 |
| 15% Pref. Shares of Rs. 100 each | 6,00,000 | Stock | 3,50,000 |
| General Reserve | 80,000 | Debtors | 4,50,000 |
| Profit & Loss A/c | 1,60,000 | Cash and Bank | 2,00,000 |
| Sundry Creditors | 1,40,000 | | |
| Bills Payable | 1,20,000 | | |
| | **21,00,000** | | **21,00,000** |

**Additional information :**

a) Realisable Value of Fixed Assets is Rs. 17,00,000 and of Stock is Rs. 3,00,000.

b) Of the Debtors Rs. 50,000 is doubtful.

c) The average profits of the company (before providing for taxation at 30%) is Rs. 6,50,000.

d) The company transfers 20% of profits after tax to Reserve Fund.

e) Normal Rate of Return is 12% on Net Capital Employed.

Find out the Intrinsic Value, Yield Value and Fair Value of equity shares.

10. Following is the Trial Balance of XYZ Ltd., as at 31-3-2013

| **Particulars** | **Dr.(Rs.)** | **Cr. (Rs.)** |
|---|---|---|
| Stock as at 1-4-2012 | 2,08,000 | – |
| Sales | – | 21,60,000 |
| Excise Duty | 40,000 | – |
| Purchases | 17,00,000 | – |
| Wages | 3,00,000 | – |
| Discount | 74,960 | 40,000 |
| Furniture | 4,00,000 | – |
| Salary | 1,48,000 | – |
| Rent | 37,800 | – |
| Sundry expenses | 20,280 | – |

| | | |
|---|---|---|
| P & L A/c as at 1-4-2012 | – | 2,04,240 |
| Goodwill | 2,60,000 | – |
| Share capital | – | 10,00,000 |
| Debtors and Creditors | 2,94,000 | 2,86,000 |
| Machinery | 3,68,000 | – |
| Cash and Bank | 1,05,200 | – |
| Reserve Fund | – | 2,06,000 |
| Patents | 1,20,000 | – |
| 10% Debentures | – | 2,00,000 |
| Interest on Debentures | 20,000 | – |
| | **40,96,240** | **40,96,240** |

**Additional information :**

a) Closing Stock as at 31-3-2013 Rs. 8,80,000

b) Depreciate Furniture at 10% and Machinery at 15%

c) Write off Rs. 60,000 from Goodwill and Rs. 20,000 from Patents.

d) Provision for taxation 30%

e) Proposed dividend 15%

f) Corporate Dividend Tax 16.225%.

Prepare Final A/c.

## ಕನ್ನಡ ಆವೃತ್ತಿ

### ವಿಭಾಗ – ಎ

ಯಾವುದಾದರೂ **ಹತ್ತು** ಉಪಪ್ರಶ್ನೆಗಳಿಗೆ ಉತ್ತರಿಸಿ. **ಪ್ರತಿ** ಉಪ ಪ್ರಶ್ನೆಗೂ **ಎರಡು** ಅಂಕಗಳು. **(2×10=20)**

1. a) ಖರೀದಿ ಬೆಲೆ ಎಂಬುದರ ಅರ್ಥವನ್ನು ನೀಡಿ.

 b) ನಿವ್ವಳ ಆಸ್ತಿ ವಿಧಾನದಲ್ಲಿ ಖರೀದಿ ಬೆಲೆ ಹೇಗೆ ನಿರ್ಧರಿಸಲ್ಪಡುತ್ತದೆ ?

 c) ಖರೀದಿ ಬೆಲೆಗಿಂತಲೂ ಮೀರಿದ ನಿವ್ವಳ ಆಸ್ತಿ ಮೌಲ್ಯದ ಹೆಚ್ಚುವರಿ ಅಂಶವನ್ನು ಕಂಪನಿಯ ಲೆಕ್ಕ ಪುಸ್ತಕಗಳಲ್ಲಿ ಹೇಗೆ ಪರಿಗಣಿಸಲಾಗುವುದು ?

 d) ಸಂಯೋಜನೆಗೂ ಮುಂಚಿನ ಲಾಭದ ಅರ್ಥವನ್ನು ನೀಡಿ.

 e) ಸಂಯೋಜನೆಗೂ ಮುಂಚಿನ ನಷ್ಟವನ್ನು ಲೆಕ್ಕ ಪುಸ್ತಕಗಳಲ್ಲಿ ಹೇಗೆ ಪರಿಗಣಿಸಲಾಗುವುದು ?

 f) ಕಂಪನಿಗಳ ವಿಷಯದಲ್ಲಿ ಕೀರ್ತಿಮೌಲ್ಯ ಮಾಪನ ಅಗತ್ಯಪಡಿಸುವ ಯಾವುದಾದರೂ ನಾಲ್ಕು ಪರಿಸ್ಥಿತಿಗಳನ್ನು ಬರೆಯಿರಿ.

 g) ತುಲನಾತ್ಮಕ ಸರಾಸರಿ ಲಾಭಗಳ ವಿಧಾನದಲ್ಲಿ ಕೀರ್ತಿಮೌಲ್ಯವನ್ನು ಹೇಗೆ ಲೆಕ್ಕ ಮಾಡಲಾಗುವುದು ?

 h) ಇಳುವರಿ ಮೌಲ್ಯ ವಿಧಾನದಲ್ಲಿ ಶೇರುಗಳ ಮೌಲ್ಯ ಮಾಪನ ಹೇಗೆ ನಿರ್ಣಯಿಸಲಾಗುವುದು ?

 i) ಸಾಮಾನ್ಯ ಶೇರುದಾರರಿಗೆ ಲಭ್ಯವಿರುವ ಲಾಭ ರೂ. 4,50,000 ಸಾಧಾರಣ ಆದಾಯ ದರ 15% ಮತ್ತು ಸಾಮಾನ್ಯ ಶೇರುಗಳ ಸಂಖ್ಯೆ 25,000. ಸಾಮಾನ್ಯ ಶೇರುಗಳ ಮೌಲ್ಯ ಕಂಡು ಹಿಡಿಯಿರಿ.

 j) ಮಧ್ಯಂತರ ಡಿವಿಡೆಂಡ್ ಮತ್ತು ಅಂತಿಮ ಡಿವಿಡೆಂಡ್ ನಡುವಿನ ವ್ಯತ್ಯಾಸ ತಿಳಿಸಿ.

 k) ಕಂಪನಿಗಳ ಕಾಯಿದೆಯ ಪ್ರಕಾರ ವ್ಯವಸ್ಥಾಪಕರಿಗೆ ನೀಡಬಹುದಾದ ಗರಿಷ್ಟ ಸಂಭಾವನೆ ಎಷ್ಟು ?

 l) ಯಾವುದಾದರೂ ನಾಲ್ಕು ಅಚರ ಆಸ್ತಿಗಳನ್ನು ತಿಳಿಸಿ.

## ವಿಭಾಗ - ಬಿ

ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ. **ಪ್ರತಿ** ಪ್ರಶ್ನೆಗೂ **ಎಂಟು** ಅಂಕಗಳು. **(8×4=32)**

2. ಮಿ. ಎ ಮತ್ತು ಮಿ. ಬಿ ಅವರುಗಳು ಮೆ. ಎಬಿ & ಕಂಪನಿಯಲ್ಲಿ ಸಮ ಪಾಲುದಾರರು. ಅವರು ತಮ್ಮ ವ್ಯವಹಾರವನ್ನು ಎಬಿ ಲಿ. ಗೆ ಮಾರಲು ಒಪ್ಪಿಕೊಳ್ಳುತ್ತಾರೆ. ಎಬಿ ಲಿ. ಎಲ್ಲಾ ಆಸ್ತಿ ಮತ್ತು ಜವಾಬ್ದಾರಿಗಳನ್ನು ಕೆಳಕಂಡ ಒಪ್ಪಿತ ಮೌಲ್ಯಗಳಿಗೆ ತೆಗೆದುಕೊಳ್ಳಲು ಒಪ್ಪುತ್ತದೆ.

   ಕೀರ್ತಿಮೌಲ್ಯ ರೂ. 75,000; ಕಟ್ಟಡ ರೂ. 1,25,000; ಯಂತ್ರಗಳು ರೂ. 1,90,000; ದಾಸ್ತಾನು ರೂ. 85,000; ಋಣಿಗಳು ರೂ. 45,000; ಸ್ವೀಕೃತಿ ಹುಂಡಿಗಳು ರೂ. 40,000; ಧಣಿಗಳು ರೂ. 60,000; ಪಾವತಿ ಹುಂಡಿಗಳು ರೂ. 30,000

   ಎಬಿ ಲಿ. ಖರೀದಿ ಬೆಲೆಯನ್ನು ಕೆಳಕಂಡಂತೆ ವಿಲೇವಾರಿ ಮಾಡುತ್ತದೆ: ರೂ. 10 ಮುಖಬೆಲೆಯ 30,000 ಸಾಮಾನ್ಯ ಶೇರುಗಳು 10% ಪ್ರೀಮಿಯಂ ಸೇರಿ ನೀಡಿಕೆ; ರೂ. 100 ಮುಖಬೆಲೆಯ 1,200 12% ಸಾಲಪತ್ರಗಳು ನೀಡಿಕೆ ಮತ್ತು ಉಳಿಕೆ ಬಾಕಿ ನಗದು ಪಾವತಿ.

   ಖರೀದಿ ಬೆಲೆಯನ್ನು ಲೆಕ್ಕ ಮಾಡಿ ಖರೀದಿ ಬೆಲೆಯ ತೀರುವಳಿಗೆ ಎಬಿ ಲಿ. ಲೆಕ್ಕ ಪುಸ್ತಕಗಳಲ್ಲಿ ಜರ್ನಲ್ ಎಂಟ್ರಿ ತೋರಿಸಿ.

3. ಎಸ್ ಎಸ್ ಲಿ. ಎಂಬ ಸಂಸ್ಥೆಯನ್ನು ದಿನಾಂಕ 1-7-2012 ರಂದು ಮೆ. ಎಸ್ ಕೆ ಮತ್ತು ಕಂ. ಯ ನಡೆಯುತ್ತಿರುವ ವ್ಯವಹಾರವನ್ನು ದಿನಾಂಕ 1-4-2012 ರಲ್ಲಿದ್ದಂತೆ ತೆಗೆದುಕೊಂಡು ಹೋಗಲು ಸಂಯೋಜಿಸಲಾಗಿದೆ. ಕಂಪನಿಯು ತನ್ನ ಲೆಕ್ಕ ಪುಸ್ತಗಳನ್ನು ದಿನಾಂಕ 31-3-2013 ರಂದು ಮುಚ್ಚುತ್ತದೆ.

   ಸಂಯೋಜನೆಗೂ ಮುಂಚಿನ ಅವಧಿಯಲ್ಲಿ 50 ನೌಕರರಿದ್ದು ಸಂಯೋಜನೆಯ ನಂತರದ ಅವಧಿಯಲ್ಲಿ ನೌಕರರ ಸಂಖ್ಯೆ 70 ಕ್ಕೆ ಹೆಚ್ಚಲ್ಪಟ್ಟಿದೆ.

   ಸಂಯೋಜನೆಗೂ ಮುಂಚಿನ ಅವಧಿಯಲ್ಲಿ ಮಾಸಿಕ ಸರಾಸರಿ ಮಾರಾಟ ರೂ. 1,00,000 ಹಾಗೂ ಸಂಯೋಜನೆಯ ನಂತರದ ಅವಧಿಯಲ್ಲಿ ಮಾಸಿಕ ಸರಾಸರಿ ಮಾರಾಟ ರೂ. 2,50,000 ಆಗಿದೆ.

   ಸಂಯೋಜನೆಗೂ ಮುಂಚಿನ ಅವಧಿಗೆ ಹಾಗೂ ಸಂಯೋಜನೆಯ ನಂತರದ ಅವಧಿಗೆ ಈ ಕೆಳಕಂಡ ವೆಚ್ಚಗಳನ್ನು ಹೇಗೆ ವಿನಾಯತಿ ಮಾಡಲಾಗುವುದು ಎಂದು ಒಂದು ಪಟ್ಟಿ ಮಾಡಿ ತೋರಿಸಿ. ಬಾಡಿಗೆ ರೂ. 96,000; ಸಂಬಳ ರೂ. 3,12,000; ಮಾರಾಟಗಾರರ ದಲ್ಲಾಳಿ ರೂ. 1,02,000 ಮತ್ತು ನಿರ್ದೇಶಕರ ಶುಲ್ಕ 25,000.

4. ನಿಶ್ಚಲ್ ಲಿ. ಸಂಸ್ಥೆಯು ನಿಶಾಂತ್ ಲಿ. ನ ವ್ಯವಹಾರವನ್ನು ಖರೀದಿಸುವ ಪ್ರಸ್ತಾಪ ಮಾಡಿದೆ. ಈ ಉದ್ದೇಶಕ್ಕಾಗಿ ಕೀರ್ತಿಮೌಲ್ಯವನ್ನು3 ವರ್ಷಗಳ ತುಲನಾತ್ಮಕ ಸರಾಸರಿ ಲಾಭಗಳನ್ನು ಪರಿಗಣಿಸಿ2 ವರ್ಷಗಳ ಖರೀದಿ ವಿಧಾನದಲ್ಲಿ ಮೌಲ್ಯ ಮಾಡಲು ಒಪ್ಪಿಗೆಯಾಗಿದೆ.

ಉಪಯೋಗಿಸಬೇಕಾದ ತೂಕ ಮೌಲ್ಯಗಳು : 2010 – 1; 2011 – 2 ಮತ್ತು 2012 – 3.

ಲಾಭಗಳು : 2010 – ರೂ. 46,000; 2011 – ರೂ. 56,000 ಮತ್ತು 2012 – ರೂ. 45,000.

2011ರ ಅಂತಿಮ ದಾಸ್ತಾನು ರೂ. 7,000ದಷ್ಟು ಹೆಚ್ಚಾಗಿ ಮೌಲ್ಯಮಾಪನಗೊಂಡಿರುವುದಾಗಿ ಕಂಡುಕೊಳ್ಳಲಾಗಿದೆ.

ನೀವು ರೂ. 10,000 ಅನ್ನು ವ್ಯವಸ್ಥಾಪನಾ ವೆಚ್ಚಕ್ಕೆ ಎಂದು ಭಾವಿಸಿ ಕೀರ್ತಿಮೌಲ್ಯ ಕಂಡು ಹಿಡಿಯಬೇಕಾಗಿದೆ.

5. ಕೆಳಕಂಡ ಮಾಹಿತಿಯಿಂದ ಇಳುವರಿ ವಿಧಾನದಲ್ಲಿ ಸಾಮಾನ್ಯ ಶೇರುಗಳ ಮೌಲ್ಯ ಕಂಡು ಹಿಡಿಯಿರಿ.

   ೧) ಎಕ್ಸ್ ಲಿ. ನ ಪಾವತಿಯಾದ ಬಂಡವಾಳ ರೂ. 100 ಮುಖಬೆಲೆಯ 10,000 15% ಪ್ರಥಮ ಹಕ್ಕಿನ ಶೇರುಗಳು ಹಾಗೂ ರೂ. 10 ಮುಖಬೆಲೆಯ ರೂ. 6 ಪಾವತಿಯಾದ 2,00,000 ಸಾಮಾನ್ಯ ಶೇರುಗಳನ್ನು ಹೊಂದಿದೆ.

   ೨) ಕಳೆದ ಮೂರು ವರ್ಷಗಳ ತೆರಿಗೆ ಮುಂಚಿನ ಸರಾಸರಿ ಲಾಭ ರೂ. 8,50,000 ಆಗಿದೆ. 30% ತೆರಿಗೆ ಮುನ್ನೇರ್ಪಾಡು ಮಾಡಲಾಗಿದೆ ಹಾಗೂ ತೆರಿಗೆ ಮುನ್ನೇರ್ಪಾಡು ನಂತರದ 20% ಲಾಭವನ್ನು ಕಂಪನಿಯು ಪ್ರತಿ ವರ್ಷ ಮೀಸಲು ನಿಧಿಗೆ ವರ್ಗಾಯಿಸುತ್ತದೆ. ಸಾಧಾರಣ ಆದಾಯ ದರ 8%.

6. ಕೆಳಕಂಡ ಅಂಶಗಳನ್ನು (ತಾಳೆ ಪಟ್ಟಿಯಲ್ಲಿ ಕೊಟ್ಟಿರುವುದು) ಕಂಪನಿ ಅಂತಿಮ ಲೆಕ್ಕ ಪತ್ರಗಳಲ್ಲಿ ಯಾವ ಶಿರೋನಾಮೆಯಲ್ಲಿ ತೋರಿಸಲಾಗುವುದು ?

   a) ಶೇರುಗಳ ನೀಡಿಕೆ ಮೇಲೆ ರಿಯಾಯಿತಿ

   b) ಜೀವಿ ದಾಸ್ತಾನು

c) ರಿಯಾಯಿತಿ ಗಳಿಸಿದ್ದು

d) ಹೂಡಿಕೆಗಳ ಮೇಲೆ ಬಡ್ಡಿ ಶೇಖರಣೆಯಾಗಿರುವುದು

e) ಕೀರ್ತಿಮೌಲ್ಯ ತೆಗೆದು ಹಾಕಿರುವುದು

f) ಪೇಟೆಂಟ್ ಮತ್ತು ಟ್ರೇಡ್ ಮಾರ್ಕ್

g) ಮುಂದುವರಿಯುತ್ತಿರುವ ಕೆಲಸ

h) ಕೀರ್ತಿಮೌಲ್ಯ

**ವಿಭಾಗ - ಸಿ**

ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿ. **ಪ್ರತಿ** ಪ್ರಶ್ನೆಗೂ **ಹದಿನಾರು** ಅಂಕಗಳು. **(16×3=48)**

7. ಆರ್ ಕೆ ಎಸ್ ಲಿ. ಎಂಬ ಸಂಸ್ಥೆಯನ್ನು ದಿನಾಂಕ 1-9-2012 ರಂದು ಮೆ. ಎಸ್ ಕೆ & ಕಂ. ಯ ನಡೆಯುತ್ತಿರುವ ವ್ಯವಹಾರವನ್ನು ದಿನಾಂಕ 1-4-2012ರಲ್ಲಿದ್ದಂತೆ ತೆಗೆದುಕೊಂಡು ಹೋಗಲು ಸಂಯೋಜಿಸಲಾಗಿದೆ. ಕಂಪನಿಯು ತನ್ನ ಲೆಕ್ಕ ಪುಸ್ತಕಗಳನ್ನು ದಿನಾಂಕ 31-3-2013ರಂದು ಮುಚ್ಚುತ್ತದೆ. ಕಂಪನಿಯ ಆದಾಯ ಮತ್ತು ವೆಚ್ಚಗಳು ದಿನಾಂಕ31-3-2013ಕ್ಕೆ ಕೊನೆಗೊಳ್ಳುವ ವರ್ಷಕ್ಕೆ ಕೆಳಕಂಡಂತಿವೆ.

| ವಿವರಗಳು | ರೂ. | ವಿವರಗಳು | ರೂ. |
|---|---|---|---|
| ಒಟ್ಟು ಲಾಭ | 24,00,000 | ವಿಕ್ರಯದಾರರಿಗೆ ಬಡ್ಡಿ(31-1-2013 ವರೆಗೆ) | 60,000 |
| ರಿಯಾಯಿತಿ ಗಳಿಸಿದ್ದು | 1,14,000 | ಬಾಡಿಗೆ ಪಾವತಿ | 96,000 |
| ಹೂಡಿಕೆಗಳ ಮೇಲೆ ಬಡ್ಡಿ | 1,20,000 | ಮಾರಾಟ ವೆಚ್ಚಗಳು | 54,000 |
| ಸಂಬಳ ಮತ್ತು ಕೂಲಿ | 3,60,000 | ನಿರ್ದೇಶಕರ ಶುಲ್ಕ | 30,000 |
| ರಿಯಾಯಿತಿ ನೀಡಿದ್ದು | 2,16,000 | ಲೆಕ್ಕ ಪರಿಶೋಧಕರ ಶುಲ್ಕ | 24,000 |

| | | | |
|---|---|---|---|
| ಪ್ರಾರಂಭಿಕ ವೆಚ್ಚ ತೆಗೆದು ಹಾಕಿದ್ದು | 10,000 | ಸವಕಳಿ | 1,44,000 |
| ಸಾಮಾನ್ಯ ವೆಚ್ಚಗಳು | 24,000 | ವಿಮೆ | 12,000 |
| ಹೊರಸಾರಿಗೆ ವೆಚ್ಚ | 5,400 | ಒಳಸಾರಿಗೆ ವೆಚ್ಚಗಳು | 2,280 |
| ವಸೂಲಾಗದ ಸಾಲಗಳು | 3,600 | ಸಾಲಪತ್ರಗಳ ಮೇಲೆ ಬಡ್ಡಿ | 24,000 |

**ಪೂರಕ ಮಾಹಿತಿ :**

೧) ಸಂಯೋಜನೆಗೂ ಮುಂಚಿನ ಅವಧಿಯಲ್ಲಿ ಮಾಸಿಕ ಸರಾಸರಿ ಖರೀದಿ ರೂ. 1,50,000 ಹಾಗೂ ಸಂಯೋಜನೆಯ ನಂತರದ ಅವಧಿಯಲ್ಲಿ ಮಾಸಿಕ ಖರೀದಿ ರೂ. 3,00,000 ಆಗಿದೆ.

೨) ಸಂಯೋಜನೆಗೂ ಮುಂಚಿನ ಅವಧಿಯಲ್ಲಿ ಮಾಸಿಕ ಸರಾಸರಿ ಮಾರಾಟ ರೂ. 2,00,000 ಹಾಗೂ ಸಂಯೋಜನೆಯ ನಂತರದ ಅವಧಿಯಲ್ಲಿ ಮಾಸಿಕ ಮಾರಾಟ ರೂ. 5,00,000 ಆಗಿದೆ.

ಸಂಯೋಜನೆಗೂ ಮುಂಚಿನ ಅವಧಿಗೆ ಹಾಗೂ ಸಂಯೋಜನೆಯ ನಂತರದ ಅವಧಿಗೆ ಮೇಲೆ ಕಂಡ ವೆಚ್ಚಗಳನ್ನು ಹೇಗೆ ವಿನಾಯತಿ ಮಾಡಲಾಗುವುದು ಎಂದು ಒಂದು ಪಟ್ಟಿ ಮಾಡಿ ತೋರಿಸಿ ಹಾಗೂ ಸಂಯೋಜನೆಗೂ ಮುಂಚಿನ ಮತ್ತು ನಂತರದ ಲಾಭಗಳನ್ನು ಲೆಕ್ಕಪತ್ರಗಳಲ್ಲಿ ಹೇಗೆ ಪರಿಗಣಿಸಲಾಗುವುದು ಎಂದು ತಿಳಿಸಿ.

8. ಎಸ್ ಎನ್ ಲಿ. ನ 30% ತೆರಿಗೆ ಮುನ್ನೇರ್ಪಾಡುಗೆ ಮುಂಚಿನ ಲಾಭಗಳು ಕೆಳಕಂಡಂತಿವೆ :

| **ಹಣಕಾಸು ವರ್ಷ** | **ಲಾಭ (ರೂ.)** | **ತೂಕ ಮೌಲ್ಯಗಳು** |
|---|---|---|
| 2008–09 | 1,60,000 | 1 |
| 2009–10 | 1,68,000 | 2 |
| 2010–11 | 1,80,000 | 3 |
| 2011–12 | 1,84,000 | 4 |
| 2012–13 | 1,88,000 | 5 |

ಕಂಪನಿಯ ಆಸ್ತಿ ಮತ್ತು ಜವಾಬ್ದಾರಿಗಳ ಪ್ರಸಕ್ತ ಮೌಲ್ಯ ಕೆಳಕಂಡಂತಿದೆ :

ಕಟ್ಟಡಗಳು ರೂ. 12,00,000; ಯಂತ್ರಗಳು ರೂ. 6,00,000; ಪೀಠೋಪಕರಣ ರೂ. 2,00,000; ದಾಸ್ತಾನು ರೂ. 3,00,000; ಋಣಿಗಳು ರೂ. 1,00,000; ನಗದು ಮತ್ತು ಬ್ಯಾಂಕು ರೂ. 50,000; ಸಾಲಪತ್ರಗಳು ರೂ. 5,00,000; ಧಣಿಗಳು ರೂ. 3,00,000; ಪಾವತಿ ಹುಂಡಿಗಳು ರೂ. 80,000 ಮತ್ತು ಬ್ಯಾಂಕ್ ಸಾಲ ರೂ. 7,70,000.

ನಿವ್ವಳ ಬಂಡವಾಳ ಹೂಡಿಕೆ ಮೇಲೆ ಸಾಧಾರಣ ಆದಾಯ 10%.

ನೀವು ಕೆಳಕಂಡ ವಿಧಾನಗಳಿಂದ ಕೀರ್ತಿಮೌಲ್ಯ ಕಂಡುಹಿಡಿಯಬೇಕಾಗಿದೆ.

೧) ಸಾಧಾರಣ ಸರಾಸರಿ ಲಾಭಗಳ 2 ವರ್ಷದ ಖರೀದಿ

೨) ತುಲನಾತ್ಮಕ ಸರಾಸರಿ ಲಾಭಗಳ 2 ವರ್ಷಗಳ ಖರೀದಿ ಹಾಗೂ

೩) ಹೆಚ್ಚುವರಿ ಲಾಭಗಳ 5 ವರ್ಷದ ಖರೀದಿ.

9. ದಿನಾಂಕ 31-3-2012 ರಲ್ಲಿದ್ದಂತೆ ಎನ್‌ವಿ ಲಿ. ನ ಅಢಾವೆ ಪತ್ರಿಕೆ ಕೆಳಗೆ ಕೊಟ್ಟಿದೆ.

| **ಜವಾಬ್ದಾರಿಗಳು** | **ರೂ.** | **ಆಸ್ತಿಗಳು** | **ರೂ.** |
|---|---|---|---|
| ರೂ. 100 ಮುಖಬೆಲೆಯ ಸಾಮಾನ್ಯ ಶೇರು | 10,00,000 | ಸ್ಥಿರ ಆಸ್ತಿಗಳು | 11,00,000 |
| 15% ಪ್ರಥಮ ಹಕ್ಕಿನ ರೂ. 100 ಮುಖಬೆಲೆಯ ಶೇರು | 6,00,000 | ದಾಸ್ತಾನು | 3,50,000 |
| ಸಾಮಾನ್ಯ ಮೀಸಲು | 80,000 | ಋಣಿಗಳು | 4,50,000 |
| ಲಾಭ ಮತ್ತು ನಷ್ಟ ಖಾತೆ | 1,60,000 | ನಗದು ಮತ್ತು ಬ್ಯಾಂಕು | 2,00,000 |
| ಧಣಿಗಳು | 1,40,000 | | |
| ಪಾವತಿ ಹುಂಡಿಗಳು | 1,20,000 | | |
| | **21,00,000** | | **21,00,000** |

**ಪೂರಕ ಮಾಹಿತಿ :**

a) ಸ್ಥಿರ ಆಸ್ತಿಗಳ ಪರಿವರ್ತಿಸಬಹುದಾದ ಬೆಲೆ ರೂ. 17,00,000 ಮತ್ತು ದಾಸ್ತಾನು ರೂ. 3,00,000

b) ಋಣಿಗಳು ರೂ. 50,000 ಅನುಮಾನಾಸ್ಪದವಾಗಿದೆ.

c) ಕಂಪನಿಯ (30% ತೆರಿಗೆ ಮುನ್ನೇರ್ಪಾಡುಗೆ ಮುಂಚಿನ) ಸರಾಸರಿ ಲಾಭಗಳು ರೂ. 6,50,000.

d) ತೆರಿಗೆ ಮುನ್ನೇರ್ಪಾಡು ನಂತರದ 20% ಲಾಭವನ್ನು ಕಂಪನಿಯು ಮೀಸಲು ನಿಧಿಗೆ ವರ್ಗಾಯಿಸುತ್ತದೆ.

e) ನಿವ್ವಳ ಬಂಡವಾಳ ಹೂಡಿಕೆ ಮೇಲೆ ಸಾಧಾರಣ ಆದಾಯ ದರ 12%.

ಪ್ರತಿ ಶೇರಿನ ಅಂತರ್ಗತ ಮೌಲ್ಯ, ಇಳುವರಿ ಮೌಲ್ಯ ಹಾಗೂ ನ್ಯಾಯಯುತ ಮೌಲ್ಯ ಕಂಡು ಹಿಡಿಯಿರಿ.

10. ದಿನಾಂಕ 31-3-2013 ರಲ್ಲಿ ಎಕ್ಸ್ ವೈಝಡ್ ಲಿ. ನ ತಾಳೆ ಪಟ್ಟಿ ಕೆಳಕಾಣಿಸಿರುವಂತಿದೆ.

| **ವಿವರಗಳು** | **ಋಣ (ರೂ.)** | **ಧನ (ರೂ.)** |
|---|---|---|
| ದಾಸ್ತಾನು 1-4-2012 ರಲ್ಲಿದ್ದಂತೆ | 2,08,000 | – |
| ಮಾರಾಟ | – | 21,60,000 |
| ಎಕ್ಸೈಸ್ ಸುಂಕ | 40,000 | – |
| ಖರೀದಿ | 17,00,000 | – |
| ಕೂಲಿ | 3,00,000 | – |
| ರಿಯಾಯಿತಿ | 74,960 | 40,000 |
| ಪೀಠೋಪಕರಣ | 4,00,000 | – |
| ಸಂಬಳ | 1,48,000 | – |
| ಬಾಡಿಗೆ | 37,800 | – |
| ಸಾಮಾನ್ಯ ವೆಚ್ಚಗಳು | 20,280 | – |
| ಲಾ ಮತ್ತು ನ ಖಾತೆ 1-4-2012 ರಲ್ಲಿದ್ದಂತೆ | – | 2,04,240 |

| | | |
|---|---|---|
| ಕೀರ್ತಿಮೌಲ್ಯ | 2,60,000 | – |
| ಶೇರು ಬಂಡವಾಳ | – | 10,00,000 |
| ಋಣಿಗಳು ಮತ್ತು ಧಣಿಗಳು | 2,94,000 | 2,86,000 |
| ಯಂತ್ರಗಳು | 3,68,000 | – |
| ನಗದು ಮತ್ತು ಬ್ಯಾಂಕು | 1,05,200 | – |
| ಮೀಸಲು ನಿಧಿ | – | 2,06,000 |
| ಪೇಟೆಂಟ್‌ಗಳು | 1,20,000 | – |
| 10% ಸಾಲಪತ್ರಗಳು | – | 2,00,000 |
| ಸಾಲಪತ್ರಗಳ ಮೇಲೆ ಬಡ್ಡಿ | 20,000 | – |
| | **40,96,240** | **40,96,240** |

**ಪೂರಕ ಮಾಹಿತಿ :**

a) ದಿನಾಂಕ31-3-2013 ರಲ್ಲಿದ್ದಂತೆ ಅಂತಿಮ ದಾಸ್ತಾನು ರೂ. 8,80,000

b) ಪೀಠೋಪಕರಣಗಳ ಮೇಲೆ 10% ಮತ್ತು ಯಂತ್ರಗಳ ಮೇಲೆ 15% ಸವಕಳಿ ತೆಗೆಯಿರಿ

c) ಕೀರ್ತಿಮೌಲ್ಯದಿಂದ ರೂ. 60,000 ಮತ್ತು ಪೇಟೆಂಟ್‌ಗಳಿಂದ ರೂ. 20,000 ತೆಗೆಯಿರಿ

d) ತೆರಿಗೆಗಾಗಿ ಮುನ್ನೇರ್ಪಾಡು 30%

e) ಸೂಚಿತ ಡಿವಿಡೆಂಡು 15%

f) ಕಾರ್ಪೋರೇಟ್ ಡಿವಿಡೆಂಡು ತೆರಿಗೆ 16.225%.

ಅಂತಿಮ ಲೆಕ್ಕಪತ್ರಗಳನ್ನು ತಯಾರಿಸಿ.